PARAHITAM
FOUNDATION®

ಪರಹಿತಮ್ ಫೌಂಡೇಷನ್‌ನ ಸಮಾಚಾರ ಪತ್ರಿಕೆ

# ವಿಹಿತಮ್


• ಸಂಪುಟ ೨

• ಮಾರ್ಚ್-ಜೂನ್ ೨೦೨೩ ಸಂಚಿಕೆ

# ಚಿಕ್ಕ ಮಕ್ಕಳೊಂದಿಗೆ ಯುಗಾದಿ



ಪರಹಿತಮ್ ಫೌಂಡೇಷನ್ ವತಿಯಿಂದ ಈ ವರ್ಷದ ಯುಗಾದಿ ಹಬ್ಬವನ್ನು ಅನಾಥಾಶ್ರಮದ ಮಕ್ಕಳೊಂದಿಗೆ ಆಚರಿಸಲಾಯಿತು. ಹಬ್ಬದ ಪ್ರಯುಕ್ತ ಸುಮಾರು 20 ಮಕ್ಕಳಿಗೆ ಹೊಸ ಬಟ್ಟೆ ಮತ್ತು ಪುಸ್ತಕಗಳನ್ನು ವಿತರಿಸಲಾಯಿತು.







# ಸ್ವರ್ಣಪ್ರಾಶನ ಸಂಸ್ಕಾರ



ಆಯುರ್ವೇದದ ಪ್ರಕಾರ ಸ್ವರ್ಣಪ್ರಾಶನವು ಮಕ್ಕಳಲ್ಲಿ ರೋಗನಿರೋಧಕ ಶಕ್ತಿಯನ್ನು ಮತ್ತು ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಪ್ರತಿ ತಿಂಗಳು ಪುಷ್ಯ ನಕ್ಷತ್ರದಂದು ಸ್ವರ್ಣಪ್ರಾಶನವನ್ನು ಮಕ್ಕಳಿಗೆ ನೀಡಲಾಗುತ್ತದೆ.

ಪರಹಿತಮ್ ಫೌಂಡೇಷನ್ ವತಿಯಿಂದ ಪುಷ್ಯ ನಕ್ಷತ್ರದಂದು ಸತ್ಯ ಸಾಯಿ ಅನಾಥಾಶ್ರಮದ ಮಕ್ಕಳಿಗೆ ಸ್ವರ್ಣಪ್ರಾಶನವನ್ನು ನೀಡುವ ಕಾರ್ಯಕ್ರಮವನ್ನು ಎರಡು ಬಾರಿ ಆಯೋಜಿಸಲಾಯಿತು.










# ಅನ್ನದಾನ ಮಹಾದಾನ

ನಮ್ಮ ಸ್ವಯಂ ಸೇವಕರ ಹುಟ್ಟುಹಬ್ಬವನ್ನು ರಾಜಾಜಿನಗರದ ಆಶ್ರಯ ವೃದ್ಧಾಶ್ರಮದಲ್ಲಿ ಆಹಾರ ವಿತರಿಸುವ ಮೂಲಕ ಆಚರಿಸಲಾಯಿತು. ಜೊತೆಗೆ ಒಂದು ಭಾನುವಾರದಂದು ರಸ್ತೆಬದಿಯಲ್ಲಿರುವ ಹಸಿದವರಿಗೆ ಆಹಾರ ನೀಡಲಾಯಿತು.






# ಒಂದು ಸದುದ್ದೇಶದ ಚಾರಣ

**ಚಾ**ರಣ ಹೋಗುವುದು ಮತ್ತು ಅಲ್ಲಿನ ಜಾಗವನ್ನು ಸ್ವಚ್ಛಗೊಳಿಸುವುದು; ಒಂದು ವಾರಾಂತ್ಯವನ್ನು ಹೀಗೆ ಸಾರ್ಥಕಗೊಳಿಸಬಹುದಲ್ಲವೇ?





ಪ್ರವಾಸಿ ಸ್ಥಳಗಳನ್ನು ಮಲಿನಗೊಳಿಸುವುದು ಸಾಮಾನ್ಯವಾಗಿಬಿಟ್ಟಿದೆ. ಮಾನವನು ತನ್ನ ಜವಾಬ್ದಾರಿ ಮರೆತು ಪ್ರಕೃತಿಯನ್ನು ಕಾಪಾಡುವ ಬದಲು ಕೆಡಿಸುತ್ತಿರುವುದು ದುರಂತದ ಸಂಗತಿ.



ನಾವು ಬೆಂಗಳೂರಿನಿಂದ 100 ಕಿ. ಮೀ ದೂರದಲ್ಲಿರುವ ನಿಜಗಲ್ಲು ಸಿದ್ಧರ ಬೆಟ್ಟಕ್ಕೆ ಹೋಗಿದ್ದೆವು. ಬೆಟ್ಟವನ್ನು ಹತ್ತುತ್ತಾ ಅಲ್ಲಿ ಪ್ರವಾಸಿಗರು ಎಸೆದಿದ್ದ ಕಸವನ್ನು ಸ್ವಚ್ಛಗೊಳಿಸುವ ಉದ್ದೇಶ ನಮ್ಮದಾಗಿತ್ತು. ಸುಮಾರು 15 ಚೀಲಗಳಷ್ಟು ಆಗುವ ಬಾಟಲ್, ತಿಂಡಿಪೊಟ್ಟಣ, ಪ್ಲಾಸ್ಟಿಕ್ ಚೀಲ, ಬಟ್ಟೆ ಮುಂತಾದ ಕಸಗಳನ್ನು ಹೆಕ್ಕಿದೆವು.


PARAHITAM
FOUNDATION®
/parahitam_foundation
+91 8088064074
www.parahitam.org


ಮೊದಲು


ನಂತರ



# ಮೊಳೆಮುಕ್ತ ಮರ

ಪರಹಿತಮ್ ಫೌಂಡೇಷನ್ ವತಿಯಿಂದ ಮರಗಳಿಗೆ ಹೊಡೆದ ಮೊಳೆಗಳನ್ನು ತೆಗೆಯುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ನಮ್ಮ ಸ್ವಯಂಸೇವಕರು ನೂರಾರು ಪಿನ್ ಮತ್ತು ಮೊಳೆಗಳನ್ನು ತೆಗೆದರು. ಇದೇ ಸಂದರ್ಭದಲ್ಲಿ ಮೊಳೆಗಳನ್ನು ಹೊಡೆಯುವುದರಿಂದ ಮರಗಳಿಗೆ ಆಗುವ ಹಾನಿಯ ಬಗ್ಗೆ ಜನರಿಗೆ ತಿಳಿವಳಿಕೆ ಮೂಡಿಸಲಾಯಿತು.







# ವೈದ್ಯಕೀಯ ನೆರವು ಹಾಗು ಆರ್ಥಿಕ ಸಹಾಯ

**ಜಾಂಡೀಸ್‌ನಿಂದ ಬಳಲುತ್ತಿದ್ದ 5 ತಿಂಗಳ ಶಿಶು ಪ್ರೇಕ್ಷಾಳಿಗೆ ಅಗತ್ಯವಿದ್ದ ರಕ್ತವನ್ನು ಸಂಗ್ರಹಿಸಲು ಸಹಾಯ ಮಾಡಲಾಯಿತು. ಹಾಗೆ ಚಿಕಿತ್ಸೆಗೆ ಹಣದ ಅವಶ್ಯಕತೆ ಇದ್ದಿದ್ದರಿಂದ 32000 ರೂಪಾಯಿಗಳನ್ನು ಸಂಗ್ರಹಿಸಿ ನೀಡಲಾಯಿತು.**

**ರವಿ ಎಂಬ ದೃಷ್ಟಿವಿಕಲಚೇತನರಿಗೆ ಮಿದುಳು ಸಂಬಂಧಿ ಶಸ್ತ್ರಚಿಕಿತ್ಸೆಗೆ 7500 ರೂಪಾಯಿಗಳನ್ನು ಸಂಗ್ರಹಿಸಿ ನೀಡಲಾಯಿತು.**

**ಶ್ರೀನಾಥ್ ಎಂಬುವವರ ಹೃದಯ ಸಂಬಂಧಿ ಶಸ್ತ್ರಚಿಕಿತ್ಸೆಗೆ ನೆರವು ನೀಡುವಂತೆ ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ಹಂಚಲಾಯಿತು.**

**6 ವರ್ಷದ ಪುಟ್ಟ ಹುಡುಗನ ಮೂತ್ರಪಿಂಡಕ್ಕೆ ಸಂಬಂಧಿಸಿದ ಶಸ್ತ್ರಚಿಕಿತ್ಸೆಗೆ 5000 ರೂಪಾಯಿಗಳ ಆರ್ಥಿಕ ಸಹಾಯವನ್ನು ಪರಹಿತಮ್ ಫೌಂಡೇಷನ್ ವತಿಯಿಂದ ಮಾಡಲಾಯಿತು.**





# ಬೇಸಿಗೆ ಶಿಬಿರ

ಗಿರಿನಗರದ ರಾಮಾಶ್ರಮದಲ್ಲಿ ಆಯೋಜಿಸಿದ್ದ ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಮನೋರಂಜನಾತ್ಮಕ  ಕ್ರೀಡೆಗಳನ್ನು ಏರ್ಪಡಿಸುವ ಅವಕಾಶ ನಮಗೆ ಸಿಕ್ಕಿತು. ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವ ಸಲುವಾಗಿ ಈ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು.

ಪರಹಿತಮ್ ಫೌಂಡೇಷನ್ ವತಿಯಿಂದ ನಾವು ಬೇರೆ ಬೇರೆ ವಯಸ್ಸಿನ ಮಕ್ಕಳಿಗೆ ನಾಮಾವಧಾನ (ಸ್ಮರಣ ಶಕ್ತಿಗೆ ಸಂಬಂಧಿಸಿದ ಆಟ), ಕಪ್ಪೆ ಜಿಗಿತ ಮುಂತಾದ ಚಟುವಟಿಕೆಗಳನ್ನು ಆಯೋಜಿಸಿದ್ದೆವು. ಮಕ್ಕಳು ಬಲು ಉತ್ಸಾಹದಿಂದ ಎಲ್ಲ ಚಟುವಟಿಕೆಗಳಲ್ಲಿ ಪಾಲ್ಗೊಂಡರು.







# ಕ್ರೀಡಾಪ್ರೋತ್ಸಾಹ

ಎಷ್ಟೋ ಮಕ್ಕಳಿಗೆ ಕ್ರೀಡೆಯಲ್ಲಿ ಆಸಕ್ತಿ ಇದ್ದು ಅವರು ನಾನಾ ಕಾರಣಗಳಿಂದ ಅದಕ್ಕೆ ಬೇಕಾದ ತರಬೇತಿ ಪಡೆಯಲು ಸಾಧ್ಯವಾಗುವುದಿಲ್ಲ. ನಾವು ಬಾಲ್ಯ ಅನಾಥಾಶ್ರಮದಲ್ಲಿ ಕ್ರೀಡೆ ಮತ್ತು ಫಿಟ್ನೆಸ್ ತರಗತಿಗಳನ್ನು ಆಯೋಜಿಸುವ ಮೂಲಕ ಕ್ರೀಡೆಯಲ್ಲಿ ಆಸಕ್ತಿ ಇರುವ ಮಕ್ಕಳಿಗೆ ಪ್ರೋತ್ಸಾಹಿಸುತ್ತಿದ್ದೇವೆ.

ಕ್ರೀಡಾಪಟು ಅಪೂರ್ವ ನಾಗರಾಜ್ ಅವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಕ್ಕಳಿಗೆ ದೇಹದಾರ್ಢ್ಯತೆ, ಪ್ರಥಮ ಚಿಕಿತ್ಸೆ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ನೀಡಿದರು. ಆಟವಾಡುವಾಗ ತಂಡ ಸಂಘಟನೆ ಎಷ್ಟು ಮುಖ್ಯ ಎಂಬುದನ್ನು ಆಟದ ಮೂಲಕವೇ ನಿರೂಪಿಸಿದರು.











# ಕೈ ಕೆಸರಾದರೆ ನೆಲ ಹಸಿರು

ಗಿಡ ಮರಗಳ ಬೆಳವಣಿಗೆ ಪರಿಸರಕ್ಕೆ ಆಗುವ ಹಾನಿಯನ್ನು ತಡೆಯಲು ಮತ್ತು ನಮ್ಮ ಭೂಮಿಯನ್ನು ರಕ್ಷಿಸಲು ಅತ್ಯವಶ್ಯಕ. ವಿಶ್ವ ಪರಿಸರ ದಿನವನ್ನು ಪರಹಿತಮ್ ಫೌಂಡೇಷನ್ ವತಿಯಿಂದ ನಾವು ಒಂದು ಪಶುಕೇಂದ್ರದ ಪರಿಸರದಲ್ಲಿ ಗಿಡಗಳನ್ನು ನೆಡುವ ಮೂಲಕ ಆಚರಿಸಿದೆವು. ನಮ್ಮ ಸ್ವಯಂಸೇವಕರು ನೇರಳೆ ಮತ್ತು ಹೊಂಗೆ ಗಿಡಗಳನ್ನು ನೆಟ್ಟು ಭೂಮಾತೆಗೆ ಹಸಿರು ತೊಡಿಸಿದರು













# ಸ್ಯಾನಿಟರಿ ನ್ಯಾಪ್ಕಿನ್ ಮತ್ತು ಪುಸ್ತಕ ವಿತರಣೆ

ವಿಜಯನಗರದಲ್ಲಿ ಜೈವಿಕ-ವಿಘಟನೀಯ ಸ್ಯಾನಿಟರಿ ನ್ಯಾಪ್ಕಿನ್‌ಗಳನ್ನು ವಿತರಿಸುವ ಮೂಲಕ ಮಹಿಳೆಯರಲ್ಲಿ ಜಾಗೃತಿ ಮೂಡಿಸಲಾಯಿತು.

ಪುಸ್ತಕಗಳ ಅಗತ್ಯವಿದ್ದ ವಿದ್ಯಾರ್ಥಿಯೊಬ್ಬನಿಗೆ 16 ಪುಸ್ತಕಗಳನ್ನು ನೀಡಿ ಶಿಕ್ಷಣಕ್ಕೆ ಉತ್ತೇಜನ ನೀಡಲಾಯಿತು.



# ಯೋಗ ದಿನಾಚರಣೆ

ವಿಶ್ವ ಯೋಗ ದಿನದ ಅಂಗವಾಗಿ ನಾವು ಬಾಲ್ಯ ಅನಾಥಾಶ್ರಮದಲ್ಲಿ ಯೋಗಾಸನ ಕಾರ್ಯಕ್ರಮವನ್ನು ಆಯೋಜಿಸಿದ್ದೆವು. ಈ ಕಾರ್ಯಕ್ರಮದಲ್ಲಿ ಯೋಗದ ಮಹತ್ತ್ವ ಮತ್ತು ಉಪಯೋಗಗಳ ಬಗ್ಗೆ ಮಕ್ಕಳಿಗೆ ವಿವರಿಸಲಾಯಿತು.







# ಪರಿಸರ ರಕ್ಷಣೆಯ ಬಗ್ಗೆ ಜಾಗೃತಿ

ಅತ್ತಿಗುಪ್ಪೆಯ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಪರಿಸರ ರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು. ಪಿ.ಇ.ಎಸ್ ಕಾಲೇಜಿನ ವಿದ್ಯಾರ್ಥಿಗಳು ಪ್ರಸಿದ್ಧವಾದ 5R ಗಳ (ರೆಫ್ಯೂಸ್, ರೆಡ್ಯೂಸ್, ರೀಯೂಸ್, ರೀಪರ್ಪೋಸ್ ಮತ್ತು ರೀಸೈಕಲ್) ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿ ಅದರ ಬಗ್ಗೆ ಚಟುವಟಿಕೆಗಳನ್ನು ನಡೆಸಿದರು.









# ಒಂದು ಶುಭ ಸುದ್ದಿ!

ಪರಹಿತಮ್ ಫೌಂಡೇಷನ್ ಇದೀಗ 80G ವಿಭಾಗದಡಿ ನೋಂದಾಯಿತಗೊಂಡಿದೆ.

ಇದರಿಂದ ದಾನಿಗಳಿಗೆ 80G ಅಡಿ ತೆರಿಗೆ ವಿನಾಯಿತಿ ಲಭ್ಯವಿರುತ್ತದೆ.

ನೀವು 8088064074 ಸಂಪರ್ಕಿಸಿ ಅಥವಾ @parahitam_foundation ಅನುಸರಿಸುವ ಮೂಲಕ ಮಾಹಿತಿ ಪಡೆಯಬಹುದು

"ಪ್ರಗತಿಯನ್ನು ಸಾಧಿಸುವುದರ ರಹಸ್ಯವೆಂದರೆ ಆರಂಭಿಸುವುದು."

- ಮಾರ್ಕ್ ಟ್ವೈನ್

# ಅಪಾಯಕಾರಿ ಚಿಪ್ಸ್ ಕವರ್

ಇತ್ತೀಚಿನ ದಿನಗಳಲ್ಲಿ ಪರಿಸರ ಹಾಳಾಗುತ್ತಿರಲು ಮುಖ್ಯ ಕಾರಣಗಳಲ್ಲಿ ಪ್ಲಾಸ್ಟಿಕ್ ಬಳಕೆ ಕೂಡ ಒಂದು. ಇಂದು ಮಕ್ಕಳು ಆಡುವ ಆಟಿಕೆಗಳಿಂದ ಹಿಡಿದು ಆಕಾಶದಲ್ಲಿ ಹಾರುವ ವಿಮಾನದವರೆಗೂ ಎಲ್ಲೆಡೆಯೂ ಪ್ಲಾಸ್ಟಿಕ್ ಇದೆ. ಪ್ಲಾಸ್ಟಿಕ್ ಎಂಬ ಮಹಾಮಾಯೆ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಅದರ ಕಪಿಮುಷ್ಟಿಯಲ್ಲಿ ನಾವೆಲ್ಲರೂ ಸಿಕ್ಕಿ ಹಾಕಿಕೊಂಡಿದ್ದೇವೆ. ಹೊರ ಬರಲಾಗದೆ ಒದ್ದಾಡುತ್ತಿದ್ದೇವೆ.

ಕಡಿಮೆ ಬೆಲೆ, ಅನುಕೂಲ, ಬಳಸಿ ಬಿಸಾಡಬಹುದು ಹೀಗೆ ಹಲವಾರು ಕಾರಣಗಳಿಂದಾಗಿ ಪ್ಲಾಸ್ಟಿಕ್ ಬಳಕೆ ಮಾಡುತ್ತಿದ್ದೇವೆ. ಅನುಕೂಲತೆಗಳ ಬಗ್ಗೆ ಅಷ್ಟೇ ಗಮನಿಸಿ ಅತಿಯಾಗಿ ಬಳಸಿ ಅದರ ಅನನುಕೂಲತೆಗಳ ಬಗ್ಗೆ ಗಮನಿಸದೆ ಇರುವುದರಿಂದ ಪ್ಲಾಸ್ಟಿಕ್ ಬಳಕೆ ಪರಿಸರಕ್ಕೆ ಹಾಗೂ ಅನ್ಯ ಜೀವಿಗಳಿಗೆ ದೊಡ್ಡ ಕಂಟಕವಾಗಿದೆ. ಪ್ಲಾಸ್ಟಿಕ್‌ನ ಅತಿಯಾದ ಉತ್ಪಾದನೆ, ಅತಿಯಾದ ಬಳಕೆ ಮಾಡುತ್ತಿದ್ದೇವೆ. ಆದರೆ ಅದನ್ನು ಮರುಬಳಕೆ ಮಾಡವಲ್ಲಿ ಅಥವಾ ಸರಿಯಾಗಿ ವಿಲೇವಾರಿ ಮಾಡುವಲ್ಲಿ ವಿಫಲರಾಗುತ್ತಿದ್ದೇವೆ. ಹೆಚ್ಚಿನ ಪ್ಲಾಸ್ಟಿಕ್‌ಗಳು ಜೈವಿಕ ವಿಘಟನೀಯವಲ್ಲ ಮತ್ತು ಬ್ಯಾಕ್ಟೀರಿಯಾ ಅಥವಾ ಇತರ ಜೀವಿಗಳಿಂದ ನೈಸರ್ಗಿಕವಾಗಿ ಒಡೆಯಲು ಸಾಧ್ಯವಿಲ್ಲ. ಹಾಗಾಗಿ ಪ್ಲಾಸ್ಟಿಕ್‌ನಿಂದ ಪರಿಸರಕ್ಕೆ ಹಾನಿ ಉಂಟಾಗುತ್ತಿದೆ.

ಹಲವಾರು ರೀತಿಯ ಪ್ಲಾಸ್ಟಿಕ್ ವಸ್ತುಗಳನ್ನು ನಾವು ಬಳಸುತ್ತೇವೆ. ಅದರಲ್ಲಿ ಮುಖ್ಯವಾಗಿ ಚಿಪ್ಸ್ ಕವರ್. ಚಿಪ್ಸ್ ಯಾರಿಗೆ ಇಷ್ಟವಿಲ್ಲ ಹೇಳಿ? ಪ್ರತಿಯೊಬ್ಬರು ಇಷ್ಟಪಟ್ಟು ತಿನ್ನುವ ತಿನಿಸು ಚಿಪ್ಸ್. ಸಾಮಾನ್ಯವಾಗಿ ಚಿಪ್ಸ್ ಖರೀದಿಸಿದಾಗ, ಅದನ್ನು ತಿನ್ನುವುದರ ಮೇಲಷ್ಟೇ ಗಮನ ಹರಿಸುತ್ತೇವೆ. ನಮಗೆ ಪ್ಯಾಕೆಟ್ ಅಗತ್ಯವಿಲ್ಲದಿರುವುದರಿಂದ ಅದನ್ನು ಬಿಸಾಡುತ್ತೇವೆ. ಆದರೆ ನಾವು ತಿಂದು ಬಿಸಾಡಿದ ಕವರ್‌ನಿಂದ ಪರಿಸರಕ್ಕೆ ಎಷ್ಟು ಹಾನಿ ಉಂಟಾಗುತ್ತದೆ ಎಂದು ನಾವು ಯಾವತ್ತೂ ಯೋಚನೆ ಮಾಡುವುದೇ ಇಲ್ಲ.

ನಾವು ತಿಂದ ಚಿಪ್ಸ್ ಕವರ್‌ಗಳನ್ನು ಮರುಬಳಕೆ ಮಾಡಬಹುದೇ ಇಲ್ಲವೇ ಎಂದು ತಿಳಿಯುವುದು ಮುಖ್ಯ. ಈಗಿನ ಪರಿಸ್ಥಿತಿಯಲ್ಲಿ ಚಿಪ್ಸ್ ಕವರ್‌ಗಳನ್ನು ಮರುಬಳಕೆ ಮಾಡಲು ಸಾಧ್ಯವಿಲ್ಲ. ಇದಕ್ಕೆ ಕಾರಣವೆಂದರೆ ಚಿಪ್ಸ್ ಕವರ್‌ಗಳ ದ್ರವ್ಯವಸ್ತು. ಸಾಮಾನ್ಯವಾಗಿ ಅಲ್ಯೂಮಿನಿಯಂ ಅಥವಾ ಪಾಲಿಥಿಲೀನ್ ವಸ್ತುಗಳಾದ ಇವು, ಕಡಿಮೆ ಸಾಂದ್ರತೆಯನ್ನು ಹೊಂದಿರುತ್ತವೆ. ಇದನ್ನು ಮರುಬಳಕೆ ಮಾಡಲು ಕಷ್ಟವಾಗುತ್ತದೆ.

ಇದರ ಹೊರತಾಗಿ, ಚಿಪ್ಸ್ ಕವರ್‌ಗಳು ವಿವಿಧ ರೀತಿಯ ಪ್ಲಾಸ್ಟಿಕ್ ವಸ್ತುಗಳನ್ನು ಹೊಂದಿರುತ್ತವೆ. ಈ ಪ್ಲಾಸ್ಟಿಕ್ ವಸ್ತುಗಳನ್ನು ಬೇರ್ಪಡಿಸುವುದು ಮರುಬಳಕೆ ಮಾಡುವ ಕಂಪನಿಗಳಿಗೆ ಕಷ್ಟವಾಗಬಹುದು.

ಚಿಪ್ಸ್ ಕವರ್‌ಗಳನ್ನು ಮರುಬಳಕೆ ಮಾಡಲಾಗದೇ ನಾವು ಕಸದ ತೊಟ್ಟಿಗೆ ಹಾಕುತ್ತೇವೆ. ಅವುಗಳನ್ನು ಸರಿಯಾಗಿ ವಿಲೇವಾರಿ ಮಾಡಿದ ನಂತರವೂ ಅವು ಇನ್ನೂ ನೆಲಭರ್ತಿಯಲ್ಲಿ ಕೊನೆಗೊಳ್ಳುತ್ತವೆ. ಮತ್ತು ಅಲ್ಲಿ ದೀರ್ಘಕಾಲ ಉಳಿದುಬಿಡಲೂಬಹುದು. ಆದ್ದರಿಂದ, ಮರುಬಳಕೆ ಮಾಡಲಾಗದ ಕಾರಣ, ಅವು ಪರಿಸರಕ್ಕೆ ಹಾನಿಕಾರಕವಾಗಿವೆ.

ಉದಾಹರಣೆಗೆ, ಮಳೆ ಬಂದು ಕಸದ ಜೊತೆ ಚಿಪ್ಸ್ ಕವರ್‌ಗಳನ್ನು ಸೇರಿಸಿಕೊಂಡು ಸಮುದ್ರಕ್ಕೆ ಸೇರಿದರೆ, ಅಲ್ಲಿ ಮೀನು ಮತ್ತು ಇತರ ಸಮುದ್ರ ಪ್ರಾಣಿಗಳು ಅವುಗಳನ್ನು ತಿನ್ನಬಹುದು. ಇದರಿಂದ ಅವರಿಗೆ ಸಮಸ್ಯೆಯಾಗಲಿದೆ. ಇಷ್ಟೇ ಅಲ್ಲ. ಪ್ಲಾಸ್ಟಿಕ್ ಕವರ್ ಮಣ್ಣಿನ ಮೇಲೆ ಹೆಚ್ಚು ಕಾಲ ಇದ್ದರೆ, ಮಣ್ಣಿಗೆ ಹಾನಿ ಮಾಡಬಹುದು. ಹೀಗೆ ಹಲವಾರು ತೊಂದರೆಗಳನ್ನು ಪ್ಲಾಸ್ಟಿಕ್‌ನಿಂದ ಪರಿಸರ ಎದುರಿಸುತ್ತಿದೆ.

ಇತ್ತೀಚೆಗೆ ಹಲವು ಕಂಪೆನಿಗಳು ಪರಿಸರದ ಬಗ್ಗೆ ಕಾಳಜಿ ವಹಿಸಿ ಪರಿಸರ ಸ್ನೇಹಿ ಪ್ಯಾಕೇಜಿಂಗ್ ಪದಾರ್ಥಗಳನ್ನು ಬಳಸುತ್ತಿವೆ ಎಂಬುದು ಸಂತೋಷದ ವಿಚಾರ. ಹಾಗೆ ನಾವು ಕೂಡ ಪರಿಸರ ಸ್ನೇಹಿ ಹಾಗೂ ಮರು ಬಳಕೆ ಮಾಡುವಂತಹ ವಸ್ತುಗಳನ್ನು ಎಷ್ಟು ಸಾಧ್ಯವೋ ಅಷ್ಟು, ಎಲ್ಲಿ ಸಾಧ್ಯವೋ ಅಲ್ಲಿ ಬಳಸೋಣ. ಪರಿಸರಕ್ಕೆ ಮಾರಕವಾದ ತ್ಯಾಜ್ಯವನ್ನು ಕಡಿಮೆ ಮಾಡಿಕೊಳ್ಳೋಣ. ನಮಗೆ ಹಾಗೂ ನಮ್ಮ ಮುಂದಿನ ಪೀಳಿಗೆಗೆ ಪರಿಸರವನ್ನು ಕಾಪಾಡಿಕೊಳ್ಳೋಣ.



- ಪ್ರಾರ್ಥನಾ ಭಟ್

# ಉತ್ತಮ ಸಮಾಜ ಮತ್ತು ವಿದ್ಯಾರ್ಥಿ

ಆತ್ಮೀಯರೇ, ಉತ್ತಮ ಸಮಾಜದ ನಿರ್ಮಾಣದಲ್ಲಿತ್ಮೀಯರೇ, ಉತ್ತಮ ಸಮಾಜದ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಕೊಡುಗೆ ಎಷ್ಟಿದೆಯೋ, ಉತ್ತಮ ವಿದ್ಯಾರ್ಥಿಗಳ ನಿರ್ಮಾಣದಲ್ಲಿ ಪಾಲಕರ, ಶಿಕ್ಷಕರ ಹಾಗೂ ಸಮಾಜದ ಪಾತ್ರವೂ ಅಷ್ಟೇ ಎಂಬುದು ನನ್ನ ಅನಿಸಿಕೆ. ಉತ್ತಮ ಸಮಾಜ ಎಂದರೇನು? ಅದು ಹೇಗಿರುತ್ತದೆ? ಎಂಬ ಸ್ಪಷ್ಟ ಕಲ್ಪನೆ ಇದ್ದರೆ ಒಂದಿಷ್ಟು ಕೆಲಸ ಮುಗಿದಂತೆ.

ಈ ಉತ್ತಮ ಸಮಾಜ ಎಂಬುದು ಒಬ್ಬೊಬ್ಬರ ದೃಷ್ಟಿಯಲ್ಲಿ ಒಂದೊಂದು ಬಗೆಯದ್ದಾಗಿರುತ್ತದೆ. ಒಬ್ಬ ರೈತನ ದೃಷ್ಟಿಯಲ್ಲಿ ಯಾರೂ ಮೋಸ ಮಾಡದೇ ಒಳ್ಳೆಯ ಬೆಲೆಗೆ ತನ್ನ ಬೆಳೆಯನ್ನು ಖರೀದಿಸಿ ವ್ಯರ್ಥ ಮಾಡದಿರುವುದು. ಒಬ್ಬ ಯೋಧನ ದೃಷ್ಟಿಯಲ್ಲಿ ದೇಶಭಕ್ತಿಯನ್ನು ತುಂಬಿ ಬಾಳುವಂತಹ ಸಮಾಜ. ಒಬ್ಬ ವಿದ್ಯಾರ್ಥಿಯ ದೃಷ್ಟಿಯಲ್ಲಿ ಸದವಕಾಶಗಳ ಸೆಲೆಯೇ ಉತ್ತಮ ಸಮಾಜ. ಒಂದು ಹೆಣ್ಣಿನ ದೃಷ್ಟಿಯಲ್ಲಿ ತಾನು ಸ್ವತಂತ್ರಳಾಗಿ ಸುರಕ್ಷಿತವಾಗಿ ಓಡಾಡಬಲ್ಲ ಹಕ್ಕನ್ನು ನೀಡುವ ಸಮಾಜವೇ ಉತ್ತಮ ಸಮಾಜವಾಗಿರುತ್ತದೆ.

ಒಬ್ಬ ವಿದ್ಯಾರ್ಥಿಯು ಉತ್ತಮ ವಿದ್ಯಾರ್ಥಿ ಎನಿಸಿಕೊಳ್ಳುವುದು ತರಗತಿಯ ಶಿಕ್ಷಣದೊಂದಿಗೆ ಸಮಾಜದಲ್ಲೂ ತನ್ನನ್ನು ತಾನು ತೊಡಗಿಸಿಕೊಂಡಾಗ, ಎಲ್ಲ ರೀತಿಯಲ್ಲೂ ತನ್ನನ್ನು ಬೆಳೆಸಿಕೊಂಡಾಗ. ವಿದ್ಯಾರ್ಥಿ ಜೀವನದಲ್ಲಿರಬಹುದು ಅಥವಾ ಉಳಿದ ಬಹುದೊಡ್ಡ ಹಾದಿಯಲ್ಲಿರಬಹುದು ವ್ಯಕ್ತಿಯು ಹೆಚ್ಚಿನ ಪಾಠವನ್ನು ಕಲಿಯುವುದು ಸಮಯದಿಂದ ಎಂಬುದು  ಸುಳ್ಳಲ್ಲ. ಸಂಸ್ಕೃತ ಸುಭಾಷಿತವೊಂದಿದೆ;

ಆಚಾರ್ಯಾತ್ ಪಾದಮದತ್ತೇ
ಪಾದಂ ಶಿಷ್ಯಃ ಸ್ವಮೇಧಯಾ|
ಪಾದಂ ಸಬ್ರಹ್ಮಚಾರಿಭ್ಯಃ
ಪಾದಂ ಕಾಲಕ್ರಮೇಣ ಚ||

ಇದರರ್ಥ; ಶಿಷ್ಯನಾದವನು ಆಚಾರ್ಯರಿಂದ ನಾಲ್ಕನೇ ಒಂದು ಭಾಗವನ್ನು ಕಲಿತರೆ, ತನ್ನ ಸ್ವಶಕ್ತಿಯಿಂದ ಕಾಲು ಭಾಗವನ್ನು ಕಲಿಯುತ್ತಾನೆ. ಉಳಿದರ್ಧ ಭಾಗದಲ್ಲಿ ಕಾಲು ಭಾಗವನ್ನು ತನ್ನ ಸಂಗಡಿಗರಿಂದ ಕಲಿತರೆ, ಉಳಿದದ್ದನ್ನು ಕಾಲವೇ ಕಲಿಸುತ್ತದೆ.

ಆಗಲೇ ಉಲ್ಲೇಖಿಸಿದ ಮಾತನ್ನು ಮುಂದುವರಿಸುವುದಾದರೆ, ವಿದ್ಯಾರ್ಥಿ ಜೀವನಕ್ಕೆ ಸಮಾಜ ಎಷ್ಟು ಮುಖ್ಯವೋ ಅದೇ ರೀತಿ ಉತ್ತಮ ಸಮಾಜಕ್ಕೆ ವಿದ್ಯಾರ್ಥಿಗಳ ಜವಾಬ್ದಾರಿಯೂ ಅಷ್ಟೇ ಮುಖ್ಯ.

ರಸ್ತೆ ದಾಟಲು ಪ್ರಯತ್ನಿಸುತ್ತಿರುವ ಅಂಗವಿಕಲರಿರಬಹುದು, ವೃದ್ಧರಿರಬಹುದು, ಅಥವಾ ಯಾರೇ ಅಸಹಾಯಕರಿರಬಹುದು, ಅಂಥವರಿಗೆ ಸಹಾಯ ಮಾಡುವ ಮೂಲಕವೋ, ಪರಿಸರ ಸ್ನೇಹಿ ವಸ್ತುಗಳನ್ನು ಬಳಕೆ ಮಾಡುವ ಮೂಲಕವೋ, ಜಾಗೃತಿ ಮೂಡಿಸಿ ಸಮಾಜದ ಸತ್ಪ್ರಗತಿಗಾಗಿ ಅಳಿಲು ಸೇವೆ ಸಲ್ಲಿಸಬಹುದು. ಈಗಿನ ಕಾಲದಲ್ಲಿ ಅನೇಕ ಮನೆಗಳಲ್ಲಿ ಹಿರಿಯರ ಮಾತಿಗಿಂತಲೂ ಮಕ್ಕಳ ಮಾತಿಗೇ ಬೆಲೆ ಜಾಸ್ತಿ. ಹೀಗಾಗಿ ವಿದ್ಯಾರ್ಥಿಗಳು ತಮ್ಮ ಪಾಲಕರನ್ನು ಸಮಾಜ ಸೇವೆಗೆ ಒತ್ತಾಯಿಸಲು ಅವಕಾಶವಿದೆ.

ಪ್ರಸ್ತುತ ವಿದ್ಯಮಾನದಲ್ಲಿ ದೇಶಭಕ್ತಿಯ ವ್ಯಾಖ್ಯಾನವೇ ಬದಲಾದಂತಿದೆ. ನಿಜವಾದ ದೇಶಭಕ್ತಿ ಎಂದರೆ ಸಮಾಜದಲ್ಲಿ ನಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಅದನ್ನು ಸರಿಯಾಗಿ ನಿಭಾಯಿಸುವುದು. ಹಿರಿಯರೊಬ್ಬರು ಹೇಳಿದ ಮಾತು ನೆನಪಾಗುತ್ತದೆ. ಒಬ್ಬ ಶಿಕ್ಷಕ ತನ್ನ ಕೆಲಸವನ್ನು ಸರಿಯಾಗಿ ನಿರ್ವಹಿಸಿದರೆ ಕೆಟ್ಟ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಮಕ್ಕಳು ತಮ್ಮ ಕೆಲಸವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿದರೆ ವೃದ್ಧಾಶ್ರಮದ ಆಲೋಚನೆಯೇ ಯಾರಿಗೂ ಬರುವುದಿಲ್ಲ. ಅಂತೆಯೇ, ಒಬ್ಬ ವಿದ್ಯಾರ್ಥಿಯು ಈ ಸಮಾಜಕ್ಕೆ ಅಭಿವ್ಯಕ್ತಿಗೊಳಿಸಿಕೊಂಡಾಗ ಇಲ್ಲಿರುವ ಸಮಸ್ಯೆ ಏನೆಂದು ತಿಳಿಯುತ್ತದೆ. ಈ ಸಮಾಜ ನನ್ನದೆಂಬ ಭಾವನೆ ಬಂದಾಗ ಸಮಸ್ಯೆಯೂ ನನ್ನದೆಂಬ ಭಾವನೆ ಬರದೇ ಇರದು. ಆಗ ಪರಿಹಾರಗಳನ್ನು ಹುಡುಕುವುದೂ ಸುಲಭ ಆದೀತು.

ವಿದ್ಯಾರ್ಥಿಯಾದವನು ವಿದ್ಯಾಭ್ಯಾಸದ ಜತೆ ಇತರರಿಗೂ ಸಹಾಯ ಮಾಡುತ್ತಾ, ಎರಡನ್ನೂ ನಿಭಾಯಿಸಬಲ್ಲ ಚಾಣಾಕ್ಷತೆಯನ್ನು ಹೊಂದಿದ್ದಲ್ಲಿ ಸಮಾಜಕ್ಕೆ ಅತ್ಯಮೂಲ್ಯ ರತ್ನವಾಗಬಲ್ಲನು. ಅಂತಹ ವಿದ್ಯಾರ್ಥಿಗಳನ್ನು ರೂಪಿಸುವುದು, ಪ್ರೋತ್ಸಾಹಿಸುವುದು ಈ ಸಮಾಜದ ಆದ್ಯ ಕರ್ತವ್ಯವಾಗಿದೆ. ವಿದ್ಯಾರ್ಥಿಗಳು ಮಳೆಹನಿಯಿದ್ದಂತೆ. ಪರಿಸರಕ್ಕೆ ತಕ್ಕಂತೆ ಬೆಳೆಯುತ್ತಾರೆ; ಬೆಳಗುತ್ತಾರೆ. ಮಳೆಹನಿಯು ಚರಂಡಿಗೆ ಬೆರೆತರೆ ಗಲೀಜಾಗಿ ಮಾರ್ಪಡುತ್ತದೆ. ಭೂಮಿಗೆ ಬಿದ್ದರೆ ಅಂತರ್ಜಲವಾಗುತ್ತದೆ. ಚಿಪ್ಪಿಗೆ ಸೇರಿದರೆ ಮುತ್ತಾಗುತ್ತದೆ. ಅಂತಹ ವಿದ್ಯಾರ್ಥಿಗಳನ್ನು ಮುತ್ತಾಗಿಸುವುದು ಸಮಾಜದ ಕರ್ತವ್ಯ.
ಗಿಡವು ತನ್ನ ಎಲೆಗಳಿಗೆಲ್ಲ ಪ್ರೀತಿಯಿಂದ ಪೋಷಕಾಂಶಗಳನ್ನೆಲ್ಲ ಧಾರೆಯೆರೆಯುತ್ತದೆ. ಅದರರ್ಥ, ಅದಕ್ಕೆ ಎಲೆ ಉದುರುವುದು ತಿಳಿದಿಲ್ಲ ಎಂದಲ್ಲ. ಉದುರಿದ ಎಲೆಗಳು ಗೊಬ್ಬರ ಆಗುವುದೆಂದು ಅದಕ್ಕೆ ತಿಳಿದಿದೆ. ಒಂದು ವೇಳೆ ಹಾರಿ ದೂರ ಹೋಗಬಹುದು, ಎಲ್ಲಿಗೇ ಹೋದರೂ ಮಣ್ಣಲ್ಲಿ ಮಣ್ಣಾಗಿ, ಮಣ್ಣಿಂದ ಗಿಡ ಪಡೆದು ಧಾರೆ ಎರೆದ ಸತ್ತ್ವವನ್ನು ಮಣ್ಣಿಗೇ ಹಿಂತಿರುಗಿಸದೇ ಬೇರೆ ದಾರಿಯಿಲ್ಲ. ಅಂತೆಯೇ ಸಮಾಜವೂ ಉತ್ತಮ ವಿದಾರ್ಥಿಗಳನ್ನು ಹೊಂದುವಲ್ಲಿ ಸಫಲವಾದರೆ ಸ್ವರ್ಗಕ್ಕೆ ಮೂರೇ ಗೇಣು ಎಂಬಂತಾಗುವುದು ಈ ಸಮಾಜ.

**’ಇಂದಿನ ಮಕ್ಕಳೇ ನಾಳಿನ ಪ್ರಜೆಗಳು’ ಎಂಬ ಮಾತಿನಂತೆ ಇಂದಿನ ಪೀಳಿಗೆ ಬದಲಾದಲ್ಲಿ ಮುಂದಿನ ತರುವಾಯು ಖುಷಿಯಿಂದ ಬದುಕಬಹುದು. 'ವಸುಧೈವ ಕುಟುಂಬಕಮ್’ ಎಂದು ಜಗತ್ತಿಗೇ ಸಾರಿದ ದೇಶ ನಮ್ಮದು. ಹೀಗಿರುವಾಗ ನಮ್ಮ ನಡುವೆಯೇ ಕಚ್ಚಾಟ ಶೋಭೆಯಲ್ಲ. ಜಾತಿ-ಧರ್ಮಗಳನ್ನು ಮೀರಿ ರೂಪ ಬಣ್ಣಗಳನ್ನು ಮೆಟ್ಟಿ, ಲಿಂಗ ತಾರತಮ್ಯವ ದಾಟಿ ಸಮಾಜವನ್ನು ಸರಿಪಡಿಸಿ ದೇಶವನ್ನು ಉತ್ತುಂಗಕ್ಕೆ ಕರೆದೊಯ್ದು ಕೀರ್ತಿ ಪತಾಕೆಯನ್ನು ಹಾರಿಸುವ ಜವಾಬ್ದಾರಿ ಈಗಿನ ವಿದ್ಯಾರ್ಥಿಗಳು ಅಥವಾ ಮುಂದಿನ ಪ್ರಜೆಗಳದ್ದಾಗಿದೆ. ನಾವೆಲ್ಲಾ ಒಂದಾಗಿದ್ದು, ಒಗ್ಗಟ್ಟಿನಿಂದಿದ್ದರೆ ಭಾರತ ’ವಿಶ್ವಗುರು’ ಆಗಲು ಅರ್ಧ ತೊಡಕು ಕಳೆದಂತೆ.**

**ವಿದ್ಯಾರ್ಥಿಗಳಿಗೆ ಸಮಾಜ ಸೇವೆಯಲ್ಲಿ ಪ್ರೋತ್ಸಾಹ ನೀಡಿ ಪಾಲಕರು ಹರಸಿದಿರೆ, ಸಿಕ್ಕ ಪ್ರೋತ್ಸಾಹವನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಂಡು ಶಾಲಾ ಶಿಕ್ಷಣದೊಂದಿಗೆ ಸಮಾಜ ಸೇವೆಯನ್ನು ಮಾಡಿದರೆ, ಶಿಕ್ಷಕರು ವಿದ್ಯಾರ್ಥಿಗಳನ್ನು ಸತ್ಪ್ರಜೆಗಳನ್ನಾಗಿಸಲು ಶ್ರಮಿಸಿದರೆ, ಹಿರಿಯರು, ಅನುಭವಿಗಳು ಮಾರ್ಗದರ್ಶನ ನೀಡಿ ಆಶೀರ್ವದಿಸಿದರೆ ಎಂತಹ ಹಿಂದುಳಿದ, ಕೆಟ್ಟು ಹೋದ ಸಮಾಜವೂ ಸರಿಯಾಗಬಲ್ಲದು. ಎಲ್ಲರೂ ಸೇರಿ ಸಮಾಜವನ್ನು ಉತ್ತಮಗೊಳಿಸೋಣ. ಅದಕ್ಕೂ ಮೊದಲು ಸಮಾಜವನ್ನು ನಮ್ಮದಾಗಿಸಿಕೊಳ್ಳೋಣ.**



**- ತೇಜಾ ಅವಧಾನಿ**
**ವಿದ್ಯಾರ್ಥಿನಿ**

# ಕನ್ನಡ ವಿಹಿತಮ್ ತಂಡ:

## ವಿನ್ಯಾಸ: ರಕ್ಷಿತ್ ಅಡಿಗ

## ಸಂಪಾದಕರು:
## ೧. ವೈಷ್ಣವೀ ಕುಲಕರ್ಣಿ
## ೨. ಗಣೇಶ ಹೆಗಡೆ

## ನೆರವು:
## ಪ್ರಮೋದ ಹೆಗಡೆ

# ನಮ್ಮನ್ನು ಸಂಪರ್ಕಿಸಿ

+91 8088064074

@parahitam_foundation

Parahitam Foundation

parahitam.foundation@gmail.com

www.parahitam.org/